ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ.- 21 / ಪಿ.ಡಬ್ಲ್ಯೂ.- 10

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 27-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಮೊಹಮ್ಮದ್ ಶರೀಫ್ ಶೇಖ್ ಜಿ |
| ತಂದೆಯ ಹೆಸರು - | ಮೊಹಮ್ಮದ್ ಯೂಸುಫ್ ಶೇಖ್ ಜೀ |
| ವಯಸ್ಸು - | 45 ವರ್ಷಗಳು |
| ಉದ್ಯೋಗ - | ಮೋಟರ್ ವಾಹನ ನೀರಿಕ್ಷಕರು, ಆರ್ ಟಿ ಓ ಕಛೇರಿ, ಹೊಸಪೇಟೆ |
| ವಾಸಸ್ಥಳ - | ಹೊಸಪೇಟೆ |

ಮುಖ್ಯ ವಿಚಾರಣೆ-ಮಾನ್ಯ ಎ. ಪಿ. ಪಿ. ಅವರಿಂದ

ನಾನು ದಿಃ 27.07.2023 ರಿಂದ ಇಲ್ಲಿಯವರೆಗೆ ಹೊಸಪೇಟೆ ಅರ್ ಟಿ ಓ ಕಚೇರಿಯಲ್ಲಿ ವಾಹನ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 29.08.2023 ರಂದು ಸದರಿ ಪ್ರಕರಣದ ವಾಹನಗಳನ್ನು ತಪಾಸಣೆ ಮಾಡಲು ಮನವಿ ಪತ್ರ ಬಂದಿತ್ತು. ಅದರಂತೆ ಅದೇ ದಿನ ಸಂಚಾರಿ ಪೊಲೀಸ್ ಠಾಣೆಯ ಆವರಣದಲ್ಲಿ ಮೋಟಾರ್ ಸೈಕಲ್ ನ್ನು ತಪಾಸಣೆ ಮಾಡಿರುತ್ತೇನೆ. ಸದರಿ ವಾಹನ ಗೇರ್ ವಾಹನ ಆಗಿದ್ದು, ಅದರ ಚಾಸ್ಸಿ ಸಂ.1 ಎಲ್ 1428553 ಹಾಗೂ ಇಂಜಿನ್ ಸಂ. 1 ಎಲ್ 1428553 ಆಗಿರುತ್ತದೆ. ಸದರಿ ವಾಹನದ ಫ್ರಂಟ್ ವೀಲ್ ಮಡ್ ಗಾಡ್, ಹೆಡ್ ಲೈಟ್, 2 ಇಂಡಿಕೇಟರ್ ಗಳು, ನಂಬರ್ ಪ್ಲೇಟ್, ಫ್ರಂಟ್ ಪೋರ್ಕ, ಹೆಡ್ ಲೈಟ್, ಇನ್ ಟ್ರೂಮೆಂಟಲ್ ಕ್ಲಸ್ಟರ್, 2 ಕನ್ನಡಿಗಳು ಜಖಂಗೊಂಡಿರುತ್ತವೆ ಹಾಗೂ ಶಾಕ್ ಅಬ್ಸರ್ ವರ್ ಸಹ ಜಖಂ ಗೊಂಡಿರುತ್ತದೆ. ಸದರಿ ವಾಹನದ ಫ್ಯೂಯಲ್ ಟ್ಯಾಂಕ್ ಬೆಂಡಾಗಿರುತ್ತದೆ. ಹಿಂದಿನ ನಂಬರ್ ಪ್ಲೇಟ್ ಮಿಸ್ಸಿಂಗ್ ಆಗಿರುತ್ತದೆ, ಹಿಂದಿನ ಎಡಭಾಗದ ಇಂಡಿಕೇಟರ್ ಜಖಂ ಗೊಂಡಿರುತ್ತದೆ. ನಾನು ಸದರಿ ವಾಹನದ ಬ್ರೇಕ್ ಸಿಸ್ಟಂ ನ್ನು ನಿಂತ ಸ್ಥಿತಿಯಲ್ಲಿ ಪರಿಶೀಲಿಸಿದಾಗ ಅವು ಸರಿಯಾಗಿವೆ ಎಂದು ಕಂಡು ಬಂತು.

ನನ್ನ ಅಭಿಪ್ರಾಯದಲ್ಲಿ ಅಪಘಾತವು ವಾಹನದ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ.- **21** / ಪಿ.ಡಬ್ಲ್ಯೂ.- **10**

ಪಾಟೀ ಸವಾಲು- ಆರೋಪಿತರ ಪರ ಶ್ರೀ ಬಿ ಸಿ ಎಂ ವಕೀಲರಿಂದ -

ನಾನು ವಾಹನ ತಪಾಸಣೆ ಮಾಡುವ ಮುನ್ನ ಪೊಲೀಸರು ಅಪಘಾತ ಯಾವ ರೀತಿ ಆಯಿತು ಎಂಬ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿ. ನಾನು ಮೋಟಾರ್ ಸೈಕಲ್ ನ್ನು ಪೊಲೀಸ್ ಠಾಣೆಯಲ್ಲಿ ತಪಾಸಣೆ ಮಾಡಿರುತ್ತೇನೆ. ನಿಪಿ-7 ಮತ್ತು 8 ಭಾವಚಿತ್ರಗಳಲ್ಲಿರುವ ಮೋಟಾರ್ ಸೈಕಲ್ ನ್ನು ನಾನು ಆ ದಿನ ತಪಾಸಣ ಮಾಡಿದೆ ಎಂದರೆ ಸರಿ. ಯಮಹಾ ಆರ್ ಎಕ್ಸ 100 ವಾಹನದಲ್ಲಿ ತಾಂತ್ರಿಕ ದೋಷ ಇದೆ ಎಂಬ ಕಾರಣದಿಂದ ಹಾಗೂ ಭಾರತದ ರಸ್ತೆಗಳಿಗೆ ಸದರಿ ವಾಹನ ಸೂಕ್ತವಲ್ಲ ಎಂಬ ಕಾರಣದಿಂದ ಸದರಿ ಕಂಪನಿಯವರು 2003 ನೇ ಇಸವಿಯಲ್ಲಿ ಈ ಬೈಕ್ ನ್ನು ತಯಾರಿಸುವುದು ಬಂದ್ ಮಾಡಿದ್ದರು ಎಂದರೆ ಸಾಕ್ಷಿ ಈ ಕಾರಣಕ್ಕೆ ಬಂದ್ ಮಾಡಿರಲಿಲ್ಲ, ಸದರಿ ಬೈಕ್ ನಿಂದ ಹೆಚ್ಚು ಶಬ್ದ ಬರುತ್ತದೆ ಎಂಬ ಕಾರಣದಿಂದ ಬಂದ್ ಆಗಿತ್ತು ಎಂದು ನುಡಿಯುತ್ತಾರೆ. ಹೀಗೆ 2003 ನೇ ಇಸವಿಯಲ್ಲಿ ತಯಾರಿಸುವುದನ್ನು ಬಂದ್ ಮಾಡಿದ ಬೈಕ್ ನ್ನು ಈ ಅವಧಿಯ ಹಿಂದೆ ಖರೀದಿ ಮಾಡಿದ ಕೆಲವು ವ್ಯಕ್ತಿಗಳು ರೇಸಿಂಗ್ ಹಾಗೂ ವೀಲಿಂಗ್ ಉದ್ದೇಶಕ್ಕೆ ಬಳಸುತ್ತಾರೆ ಎಂದರೆ ಸರಿ. ನಾನು ಮೋಟಾರ್ ವಾಹನ ನಿರೀಕ್ಷಕನಾಗಿರುವುದರಿಂದ ಹೈವೇ ರಸ್ತೆಗಳಲ್ಲಿ ನಿಂತು ವಾಹನಗಳನ್ನು ಪರಿಶೀಲನೆ ಮಾಡಿರುವ ಅನುಭವ ಇದೆ ಎಂದರೆ ಸರಿ. ಸಾಕ್ಷಿ ನಿಪಿ-7 ಮತ್ತು 8 ಭಾವಚಿತ್ರಗಳನ್ನು ಎದುರು ತೋರಿಸಿ ಸದರಿ ವಾಹನದಲ್ಲಿ ಮುಂದಿನ ಗಾಲಿ ಹಾಗೂ ಎರಡು ಹ್ಯಾಂಡಲ್ ಗಳು ಹಾಗೂ ಫ್ಯೂಯಲ್ ಟ್ಯಾಂಕ್ ಅಂದರೆ ವಾಹನದ ಮುಂದಿನ ಭಾಗ ಮಾತ್ರ ಜಖಂಗೊಂಡಿರುತ್ತದೆ ಎಂದರೆ ಸರಿ. ಸದರಿ ವಾಹನದ ಹಿಂಭಾಗ ಶೇ.95 ರಷ್ಟು ಜಖಂ ಗೊಂಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಇಂಡಿಕೇಟರ್ ಜಖಂ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಈ ವಾಹನ ವೀಲಿಂಗ್ ಮಾಡಿಕೊಂಡು ಹೋಗಿ, ಬೇರೆ ವಾಹನಕ್ಕೆ ಡಿಕ್ಕಿ ಹೊಡೆದರೆ ಅಥವಾ ಗುಡ್ಡಕ್ಕೆ ಜೋರಾಗಿ ಅಪ್ಪಳಿಸಿದರೆ ಈ ರೀತಿ ಡ್ಯಾಮೇಜ್ ಗಳು ಆಗುವ ಸಾಧ್ಯತೆಗಳು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಒಂದು ವೇಳೆ ವಾಹನ ಸ್ಕೀಡ್ ಆದರೂ ಸಹ ಈ ರೀತಿ ಡ್ಯಾಮೇಜ್ ಆಗುತ್ತದೆ ಎಂದು ನುಡಿಯುತ್ತಾರೆ. ಒಂದು ವೇಳೆ ವಾಹನ ಸ್ಕೀಡ್ ಆಗಿದ್ದರೆ ಅದರ ಬಲ ಭಾಗ ಅಥವಾ ಎಡ ಭಾಗಕ್ಕೆ ಡ್ಯಾಮೇಜ್ ಆಗುತ್ತದೆ ಆದರೆ ಈ ವಾಹನ ವನ್ನು ವೀಲಿಂಗ್ ಮಾಡಿದ್ದರಿಂದ ಅದರ ಮುಂದಿನ ಭಾಗಕ್ಕೆ ಡ್ಯಾಮೇಜ್ ಆಗಿದೆ ಎಂದರೆ ಸಾಕ್ಷಿ ಅದರ ಮಡ್ ಗಾರ್ಡ್ ಫ್ರಂಟ್ ಪೋರ್ಕ ಜಖಂ ಆಗಿರುತ್ತದೆ, ಹೀಗೆ ಒಂದು ವಾಹನಕ್ಕೆ ರಭಸವಾಗಿ ಡಿಕ್ಕಿ ಆದರೆ ಅಥವಾ ಸ್ಕಿಡ್ ಆದರೆ ಆಗುವ

ಸಾಧ್ಯತೆ ಇದೆ ಎಂದು ನುಡಿಯುತ್ತಾರೆ. ಒಂದು ವೇಳೆ ಮೋಟಾರ್ ಸೈಕಲ್ ಕಾರಿನ ಹಿಂಬದಿಗೆ ಡಿಕ್ಕಿ ಹೊಡೆದರೆ ಸದರಿ ಕಾರಿನ ಹಿಂಭಾಗವು ಪೂರ್ಣ ಪ್ರಮಾಣವಾಗಿ ಜಖಂ ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಹಾಗೇನಿಲ್ಲ, ಹಿಂಬದಿಯ ಒಂದು ಭಾಗ ಅಂದರೆ ಬಂಪರ್ ಜಖಂ ಆಗುವ ಸಾಧ್ಯತೆ ಇದೆ ಎಂದು ನುಡಿಯುತ್ತಾರೆ. ಮೋಟಾರ್ ವಾಹನ ಚಲಾಯಿಸುತ್ತಿದ್ದ ಚಾಲಕನು ಕಾರಿನ ಹಿಂಭಾಗಕ್ಕೆ ಡಿಕ್ಕಿ ಹೊಡೆದು ಸ್ಕೀಡ್ ಆಗಿ ಬಿದ್ದುದ್ದರಿಂದ ಅಂದರೆ ಅವನ ತಪ್ಪಿನಿಂದ ಈ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಮೋಟಾರ್ ಸೈಕಲ್ ನ್ನು ತಪಾಸಣೆ ಮಾಡಲು ಹೋದಾಗ ಸದರಿ ವಾಹನ ಯಾವ ವಾಹನಕ್ಕೆ ಡಿಕ್ಕಿ ಹೊಡೆದಿರುತ್ತದೆ ಎಂಬ ಬಗ್ಗೆ ಹಾಗೂ ಆ ವಾಹನಕ್ಕೆಯಾವ ರೀತಿ ಜಖಂ ಆಗಿರುತ್ತದೆ ಎಂಬ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ನಾನು ಪೊಲೀಸರ ಮನವಿ ಪತ್ರದ ಆಧಾರದ ಮೇಲೆ ಠಾಣೆಯಲ್ಲಿ ಸುಳ್ಳು ವರದಿಯನ್ನು ತಯಾರಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇರದಿದ್ದರೂ ನಾನು ಸುಳ್ಳು ವರದಿ ಕೊಟ್ಟು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.